ಅ.ದಾ. ನಂ. 13/2023 ಪಿ .ಡಬ್ಲ್ಯೂ-1

ದಿನಾಂಕಃ 03.03.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತನ್ನು ಯಾವಾಗ ಖರೀದಿಸಿರುತ್ತೀರ ಎಂದರೆ 1998 ರಲ್ಲಿ. ಯಾರಿಂದ ಖರೀದಿಸಿರುತ್ತೀರ ಎಂದರೆ ತಿಮ್ಮೇಗೌಡ ಮತ್ತು ನಿಂಗಮ್ಮ. ಕ್ರಯಕ್ಕೆ ಪಡೆಯುವಾಗ ಎಷ್ಟು ವಿಸ್ತೀರ್ಣ ತಿಮ್ಮೇಗೌಡರವರ ಹೆಸರಿನಲ್ಲಿತ್ತು ಎಂದರೆ ಉ-ದ 120 ಅಡಿ, ಪೂ-ಪ 50 ಅಡಿ. ನಾನು 1ನೇ ಪ್ರತಿವಾದಿ ಮತ್ತು ಕಾಂತರಾಜು ಮೂರೂ ಜನ ಸದರಿ ಸ್ವತ್ತನ್ನು ಖರೀದಿಸಿರುತ್ತೇವೆ. 3 ಜನ ಜಂಟಿ ಖಾತೆ ಮಾಡಿಸಿಕೊಂಡಿರುತ್ತೀರ ಎಂದರೆ ಜಂಟಿ ಖಾತೆ ಮಾಡಿಸಿಕೊಂಡಿರುವುದಿಲ್ಲ. ಪ್ರತ್ಯೇಕವಾಗಿ ಮಾಡಿಸಿಕೊಂಡಿರುತ್ತೇವೆ. ಯಾವಾಗ ಪ್ರತ್ಯೇಕ ಖಾತೆ ಮಾಡಿಸಿಕೊಂಡಿರುತ್ತೀರ ಎಂದರೆ ಖರೀದಿಸಿದ ಸ್ವಲ್ಪ ದಿನದ ನಂತರ. ಯಾವ ಅಧಾರದ ಮೇಲೆ ಪ್ರತ್ಯೇಕವಾಗಿ ಖಾತೆಯಾಗಿರುತ್ತದೆ ಎಂದರೆ ಪಾಲುಪಾರಿಕತ್ತು ಮಾಡಿಕೊಂಡಿರುತ್ತೇವೆ. ಕ್ರಯ ಪತ್ರ ಆದ ಎಷ್ಟು ದಿನದ ನಂತರ ಪಾಲುಪಾರಿಕತ್ತು ಮಾಡಿಕೊಂಡಿದ್ದೀರ ಎಂದರೆ ನೆನಪಿಲ್ಲ. ಸಮಭಾಗ ಮಾಡಿಕೊಂಡಿರುತ್ತೀರ ಎಂದರೆ ಹೌದು. ಒಟ್ಟು ವಿಸ್ತೀರ್ಣದ ಯಾವ ದಿಕ್ಕಿಗೆ ನನ್ನ ಭಾಗ ಬಂದಿರುತ್ತದೆ ಎಂದರೆ ಉತ್ತರ ದಿಕ್ಕಿಗೆ. ನನ್ನ ಪಕ್ಕದ ಸ್ವತ್ತು ಕಾಂತರಾಜುರವರಿಗೆ ಹೋಗಿರುತ್ತದೆ. ಕಾಂತರಾಜುರವರ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ಹಿಸ್ಸೆ ಬಂದಿರುತ್ತದೆ. ಪಂಚಾಯಿತಿ ಪಾಲುಪಾರಿಕತ್ತು ಪ್ರಕಾರ ಎಷ್ಟು ವಿಸ್ತೀರ್ಣ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಉ-ದ 20 ಅಡಿ, ಪೂ-ಪ 10 ಅಡಿ. ಪಾಲುಪಾರಿಕತ್ತು ಪ್ರಕಾರ ಖಾತೆ ಮಾಡಿಸಿಕೊಂಡಿದ್ದೀರ ಎಂದರೆ ಮಾಡಿಸಿಕೊಂಡಿರುತ್ತೇನೆ.

2. ಪಂಚಾಯಿತಿಯಿಂದ ಖಾತೆಯನ್ನು ಪಡೆದುಕೊಂಡಿದ್ದೀರ ಎಂದರೆ ಪಡೆದಿರುತ್ತೇನೆ. ಸದರಿ ಖಾತೆಯಲ್ಲಿರುವ ವಿಸ್ತೀರ್ಣವನ್ನು ತಿಳಿದುಕೊಂಡಿದ್ದೀರ ಎಂದರೆ

ತಿಳಿದುಕೊಂಡಿರುತ್ತೇನೆ. ಖಾತೆಯಲ್ಲಿ ಚೆಕ್ಕುಬಂದಿ ತಿಳಿಸಿರುತ್ತಾರ ಎಂದರೆ ಹೌದು. ನಿಪಿ 1 ರಲ್ಲಿ ಚೆಕ್ಕುಬಂದಿ ಇರುವುದಿಲ್ಲ ಎಂದರೆ ನಾನು ತೆಗೆದುಕೊಂಡಿರುತ್ತೇನೆ.

3. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಪೂ-ರಸ್ತೆ, ಪ-ನನ್ನ ಸ್ವತ್ತು, ಉ-ಹರೀಶ್, ದ-ರಂಗಶೆಟ್ಟಿ, ಯಾವ ಸ್ವತ್ತಿಗೆ ದಾವೆ ಸಲ್ಲಿಸಿದ್ದೀರ ಎಂದರೆ ಖಾಲಿ ಜಾಗಕ್ಕೆ ವಿಭಾಗದಲ್ಲಿ ಬಂದಿರುವ 10*20 ಅಡಿ ವಿಸ್ತೀರ್ಣಕ್ಕೆ ದಾವೆ ಸಲ್ಲಿಸಿದ್ದೀರ ಎಂದರೆ ಇಲ್ಲ. ಅಲ್ಲಿ ಮಳಿಗೆ ಇರುತ್ತದೆ. 1ನೇ ಪ್ರತಿವಾದಿ ಸ್ವತ್ತಿಗೂ ದಾವಾ ಸ್ವತ್ತಿಗೂ ನಡುವೆ ಏನಿದೆ ಎಂದರೆ 5 ಅಡಿ ಜಾಗ. ಸದರಿ 5 ಅಡಿ ಜಾಗದಲ್ಲಿ ಮೂರೂ ಜನಕ್ಕೂ ಹಕ್ಕಿರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂದಿಯಲ್ಲಿ 5 ಅಡಿ ತೋರಿಸಿದ್ದೀರ ಎಂದರೆ ಇಲ್ಲ. ಸದರಿ 5 ಅಡಿ ಜಾಗದ ಬಗ್ಗೆ ವಕೀಲರಿಗೆ ತಿಳಿಸಿದ್ದೀರ ಎಂದರೆ ಇಲ್ಲ.

4. ದಾವಾ ಸ್ವತ್ತಿನ ಸರ್ವೆಗೆ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೀರ ಎಂದರೆ ಸಲ್ಲಿಸಿರುತ್ತೇನೆ. ಯಾವಾಗ ಸರ್ವೆ ಮಾಡಿರುತ್ತಾರೆ ಎಂದರೆ ಖಾತೆ ಪಡೆದ ನಂತರ. ಸದರಿ ನಕಾಶೆಯನ್ನು ಪಡೆದುಕೊಂಡಿದ್ದೀರ ಎಂದರೆ ಇಲ್ಲ. ಸದರಿ 5 ಅಡಿ ಜಾಗದ ಬಗ್ಗೆ ಯಾವಾಗ ತಿಳಿದುಬಂದಿರುತ್ತದೆ ಎಂದರೆ ದಾವೆ ಸಲ್ಲಿಸಿದ ನಂತರ. ಸದರಿ 5 ಅಡಿ ಜಾಗ ಮೂರು ಜನಕ್ಕೂ ಸೇರುತ್ತದೆ ಎಂದು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೀರ ಎಂದರೆ ಇಲ್ಲ. 1ನೇ ಪ್ರತಿವಾದಿಯ ಸ್ವತ್ತಿಗೂ ಮತ್ತು ದಾವಾ ಸ್ವತ್ತಿನ ನಡುವೆ ಹಳೆ ಕಾಲದ ಬೇಲಿ ಇದೆ ಎಂದರೆ 1ನೇ ಪ್ರತಿವಾದಿ 3 ಅಡಿಗೆ ಮನೆ ಕಟ್ಟಿದ್ದ ನಂತರ ನಾನು ಬೇಲಿ ಹಾಕಿರುತ್ತೇನೆ. ಹಳೆ ಬೇಲಿ ಇರುವುದಿಲ್ಲ. ಸದರಿ ಬೇಲಿಯ ದಕ್ಷಿಣಕ್ಕೆ 1ನೇ ಪ್ರತಿವಾದಿ ಹಿಸ್ಸೆಗೆ ಬಂದಿರುವ ಜಾಗದ ಖಾತೆಯಾಗಿರುತ್ತದೆ ಎಂದರೆ ಹೌದು.

5. ಪ್ರತಿವಾದಿ ತೊಂದರೆ ಕೊಡುತ್ತಿದ್ದಾರೆ ಎಂದು ದೂರು ದಾಖಲಿಸಿದ್ದೀರ ಎಂದರೆ ದೂರು ಕೊಟ್ಟು ದಾವೆ ಸಲ್ಲಿಸಿರುತ್ತೇವೆ. ಅದರ ಪ್ರತಿ ಪಡೆದಿರುವುದಿಲ್ಲ. ಯಾವ ದಿನಾಂಕ ಪ್ರತಿವಾದಿಗಳು ತೊಂದರೆ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೀರ ಎಂದರೆ ಇಲ್ಲ.

ಅ.ದಾ. ನಂ. 13/2023                                    ಪಿ.ಡಬ್ಲ್ಯೂ-1

ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ವ್ಯಾಜ್ಯ ಕಾರಣದ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಹದ್ದುಬಸ್ತು ಮಾಡಿಸದ ಕಾರಣ ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.